ನಾವು ಇಲ್ಲಿ ಈಗ ಈ ಪ್ರಶ್ನೆಯನ್ನು ಕೇಳುವಂಥ ಸಂದರ್ಭವೇ ಬರುತ್ತಿರಲಿಲ್ಲ. ಅದಕ್ಕಾಗಿ, ಮಾನ್ಯ ಸಚಿವರು ತಮ್ಮ ಅಧಿಕಾರಿಗಳು ಕೊಡುವಂಥ ಉತ್ತರಗಳನ್ನು ವಿವರವಾಗಿ ಪರಿಶೀಲಿಸಬೇಕು ಎಂದು ತಮ್ಮ ಮುಖಾಂತರ ಅವರನ್ನು ಕೇಳಬಯಸುತ್ತಿದ್ದೇನೆ.

ಶ್ರೀ ಡಿ.ಹೆಚ್. ಶಂಕರಮೂರ್ತಿ:– ಮಾನ್ಯ ಸದಸ್ಯರು ಹೇಳತಕ್ಕಂಥಾದ್ದು ಸ್ವಲ್ಪ ಸರಿಯಿದೆ. ಪಾಲಿಟೆಕ್ನಿಕ್ ಕಾಲೇಜುಗಳನ್ನು ಅಪ್ ಗ್ರೇಡ್ ಮಾಡುವ ಒಂದು ಪಟ್ಟಿಯನ್ನು ನಾವು ಅನೌನ್ಸ್ ಮಾಡಿದ್ದೆವು. ಆದರೆ A.I.C.E.T. ಯವರು ಅಪ್ ಗ್ರೇಡ್ ಮಾಡಲಿಕ್ಕೆ ಒಪ್ಪಲಿಲ್ಲ. ಬೇಕಿದ್ದರೆ ಹೊಸದನ್ನು ಮಾಡಿಕೊಳ್ಳಿ. ಇದನ್ನು ಅಪ್ ಗ್ರೇಡ್ ಮಾಡಕೂಡದು ಎಂದು ಹೇಳಿದ ಮೇಲೆ ಅದನ್ನು ಡ್ರಾಪ್ ಮಾಡಿದೆವು. ಆ ಪೂರ್ತಿ proposal ಹೋಯಿತು. ನಾವು ನಂಜುಂಡಪ್ಪ ವರದಿಯನ್ನು ಆಧಾರವಾಗಿಟ್ಟುಕೊಂಡು, ರಾಜ್ಯದ ಹಿತವನ್ನು ಕಾಪಾಡಿಕೊಳ್ಳುತ್ತಾ, ನಮ್ಮ ಬಜೆಟ್ ಎಷ್ಟು ಅಲೋ ಮಾಡುತ್ತದೋ ಅಷ್ಟನ್ನು ಮಾಡುತ್ತಿದ್ದೇವೆ. ಇಲ್ಲಿ ನಾನು ಗೌರವಾನ್ವಿತ ಸದಸ್ಯರಿಗೆ ಹೇಳಲು ಇಷ್ಟಪಡುತ್ತೇನೆ, ನಮ್ಮ ಆಸೆ ತುಂಬಾ ಇದೆ. ಪ್ರತಿ ಜಿಲ್ಲಾ ಕೇಂದ್ರದಲ್ಲಿ ಒಂದು ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಆಗಬೇನ್ನುವುದು ನಮ್ಮ ಆಸೆಯಾಗಿದೆ. ಎಲ್ಲ ಕಡೆಯೂ ಆಗಬೇಕು. ನಮ್ಮ ರಾಜ್ಯದಲ್ಲಿರತಕ್ಕಂಥ 127 ಇಂಜಿನಿಯರಿಂಗ್ ಕಾಲೇಜಿಗಳಲ್ಲಿ 2 ಮಾತ್ರ ಸರ್ಕಾರಿ ಕಾಲೇಜುಗಳಾಗಿವೆ. ಬಾಕಿ ಎಲ್ಲವೂ privateನವರದ್ದಾಗಿದೆ. ಹಾಗಾಗಿ, ನಾವು ನಂಜುಂಡಪ್ಪ ವರದಿಯನ್ನು ಆಧಾರವಾಗಿಟ್ಟುಕೊಂಡು ಈ ವರ್ಷ 8 ಕಾಲೇಜುಗಳನ್ನು ಪ್ರಾರಂಭ ಮಾಡಬೇಕೆಂದು ಮಾಡಿದ್ದೇವೆ. ಅದಕ್ಕೆ cabinet approval ಬಂದಿದೆ. A.I.C.E.T. ಯಿಂದ ಈಗಾಗಲೇ ನಾಲ್ಕಕ್ಕೆ approval ಬಂದಿದೆ, ಇನ್ನು ನಾಲ್ಕಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಹಾಗಾಗಿ ಗೌರವನ್ವಿತ ಸದಸ್ಯರು ಸರ್ಕಾರದ ಜೊತೆಗೆ ಸ್ವಲ್ಪ ಸಹಕಾರ ಕೊಡಬೇಕು. ಹೆಚ್ಚಿನ ಕಾಲೇಜುಗಳನ್ನು ತೆರೆಯಬೇಕು ಎನ್ನುವ ಆಸೆ ನಮಗಿದ್ದರೂ ಕೂಡ ನಮ್ಮ ಕೈಯಲ್ಲಿ ಆಗುತ್ತಿಲ್ಲ. ಹಾಗಾಗಿ, ಕೆಲವು ಮಾಹಿತಿಗಳು ಅರ್ಧ ಇದ್ದಾಗ ಸದಸ್ಯರಿಗೆ ಕೋಪ ಬರುತ್ತದೆ. ದಯಮಾಡಿ ಸಮಾಧಾನ ಮಾಡಿಕೊಳ್ಳಬೇಕು ಎಂದು ಹೇಳುತ್ತೇನೆ.

ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 25–07–2007ರಂದು ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 13ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 73 ಪ್ರಶ್ನೆಗಳ ಪೈಕಿ 64 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:– ಮಂಡಿಸಲಾಯಿತು.

[ಅನುಬಂಧ–1]

3. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರು):–

ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು 31ನೇ ಮಾರ್ಚ್ 2006ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಲೆಕ್ಕಾ ಪರಿಶೋಧನೆ (ರಾಜಸ್ವ ಸ್ವೀಕೃತಿ) ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:– ಮಂಡಿಸಲಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರು):–

1965ರ ಕರ್ನಾಟಕ ಅಬಕಾರಿ ಕಾಯ್ದೆ 71(4)ರ ಪ್ರಕರಣದ ಮೇರೆಗೆ:

1968ರ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳ ನಿಯಮ 8ಕ್ಕೆ ತಿದ್ದುಪಡಿ ಮಾಡಿ ದಿನಾಂಕ 29.06.2007ರಂದು ಹೊರಡಿಸಲಾದ ಎಫ್‌ಡಿ 09 ಸಿಇಎಸ್ 2007ನೇ ಸಂಖ್ಯೆಯ ಅಧಿಸೂಚನೆ.

2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದ ಕಲಂ 89ನೇ ಪ್ರಕರಣದ ಮೇರೆಗೆ:

1. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆಯಡಿ ವರ್ತಕರು ಮಾರಾಟ ಮಾಡುವ ಭತ್ತ ಮತ್ತು ಅಕ್ಕಿ, ಗೋಧಿ, ದಿನಸಿಗಳು, ಅಕ್ಕಿ ಗೋಧಿ ರವೆ, ಗೋಧಿ ಮೈದಾ ಮುಂತಾದವುಗಳ ಮೇಲೆ ದಿನಾಂಕ 01.04.2007ರಿಂದ 01.03.2008ರವರೆಗೆ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 30.03.2007ರಂದು ಹೊರಡಿಸಲಾದ ಎಫ್‌ಡಿ 115 ಸಿಎಸ್‌ಎಲ್ 2007(1)ನೇ ಸಂಖ್ಯೆಯ ಅಧಿಸೂಚನೆ.

1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯ ಪ್ರಕರಣ 39ರ ಮೇರೆಗೆ:

2. ಮೀನುಗಾರರು ಮೀನು ಚಟುವಟಿಕೆಗಳಿಗೆ ಬಳಸುವ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು 01.04.2007ರಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ